ಬಂದು ವಾಕ್ ಔಟ್ ಮಾಡಿ ಹೊರಗೆ ಹೋಗಿ ತಮಗೆ ಬರೆದುಕೊಟ್ಟರೆ, ಆರೀತಿ ಎಲ್ಲ ಮಾಡುವುದಕ್ಕಾಗುವುದಿಲ್ಲ.

ಶ್ರೀ ಮತಿ ಬಿ.ಟಿ.ಲಲಿತಾ ನಾಯಕ:- ಪ್ರಶ್ನೆ 181, ಶ್ರೀಮತಿ ಪ್ರಮೀಳಾ ನೇಸರ್ಗಿಯರದು, ಅವರು ನನಗೆ ಆಥರೈಸ್ ಮಾಡಿದ್ದಾರೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್:- ಇದು ಮಹಿಳೆಯರಿಗೆ ಸಂಬಂಧಪಟ್ಟ ಪ್ರಶ್ನೆ.

ಅಧ್ಯಕ್ಷರು:- ಈ ಪ್ರಶ್ನೆ ಬಹಳ ಪ್ರಮುಖವಾಗಿರುವುದರಿಂದ ನಾನು ಬೇಕಾದರೆ ಅದನ್ನು ತಡೆಹಿಡಿಯುತ್ತೇನೆ. ಇನ್ನೊಂದು ದಿನಕ್ಕೆ ಹಾಕಿಕೊಳ್ಳೋಣ. ವಿಷಯದ ಹಿತದೃಷ್ಟಿಯಿಂದ ಮತ್ತು ಅವರು ಅಷ್ಟೊಂದು ಎಫರ್ಟ್ ಮಾಡಿದ್ದಾರೆಂದು ನಾನು ಇದನ್ನು ತಡೆಹಿಡಿದಿದ್ದೇನೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್:- ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಒಬ್ಬರೇ ಹೋಗಿಲ್ಲ, ಅವರು ಪಾರ್ಟಿ ವತಿಯಿಂದ ಹೋಗಿರಬಹುದು. ಇದು ಮಹಿಳೆಯರಿಗೆ ಸಂಬಂಧಪಟ್ಟ ಪ್ರಶ್ನೆಯಾದುದರಿಂದ ತಾವು ಇದಕ್ಕೆ ಅವಕಾಶ ಮಾಡಿಕೊಡಬಹುದೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:- ಮಹಿಳೆಯರ ಬಗ್ಗೆ ನನಗಿಂತ ಕರುಣೆ ಇರುವವರು ಇದ್ದಾರೆಯೇ ಹೇಳಿ, ನಿಮಗೇ ಗೊತ್ತಿದೆ. ಇಲ್ಲಿಗೆ ಪ್ರಶ್ನೋತ್ತರ ಏಳ ಮುಗಿಯಿತು. ನೋಡಿದಿರಾ ಸ್ವಾಮಿ ಹೇಗಿದೆ ಮಹಾಭಾಗ್ಯ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ನಾನು ಹೇಳಿದ್ದುದು 3 ಗಂಟೆಗೆ ಇದನ್ನು ಹಾಕಿದ್ದರೆ ಏನಾಗುತ್ತಿತ್ತು? ಆಕಾಶ ಕಳಚಿ ಬೀಳುತ್ತಿತ್ತೇ?

5. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):- ದಿನಾಂಕ 5ನೇ ಜುಲೈ 1996ರ ಮೊದಲನೆಯ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 24 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳ ಉತ್ತರಗಳನ್ನು ತಮ್ಮ ಅನುಮತಿ ಕೋರಿ ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ಬಾಗಲಕೋಟೆ ಡಿವಿಜನ್‌ನಲ್ಲಿ ಡಿಪೋಗಳ ಕುರಿತು ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 4 (8)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿ ಬರುವ ಡಿಪೋಗಳ ಸಂಖ್ಯೆ ಎಷ್ಟು?

ಆ) ಸದರಿ ವಿಭಾಗದಲ್ಲಿ ಒಟ್ಟು ಎಷ್ಟು ಷೆಡ್ಯೂಲ್‌ಗಳು (ಕಿ.ಮಿ. ಸಹಿತ) ರದ್ದಾಗಿದೆ. ಹಾಗೂ ಸರಿಯಾಗಿ ನಿಗದಿತ ಸಮಯಕ್ಕೆ ಓಡದ ಬಸ್ಸುಗಳ ಸಂಖ್ಯೆ ಎಷ್ಟು? ಹಾಗೂ ಅವುಗಳ ಲಾಭಹಾನಿ ಬಗ್ಗೆ ವಿವರ ನೀಡುವುದು (ಡಿಪೋವಾರು ವಿವರ)

ಇ) ಈ ವಿಭಾಗದಲ್ಲಿ ಏಳು ಲಕ್ಷ ಕಿ.ಮಿ. ಗಿಂತ ಹೆಚ್ಚಿಗೆ ಓಡುತ್ತಿರುವ ಬಸ್ಸುಗಳ ಸಂಖ್ಯೆ ಎಷ್ಟು? ಹಾಗೂ ಎಷ್ಟು ವರ್ಷಗಳಿಂದ ಓಡುತ್ತಿದೆ. ಅವುಗಳನ್ನು ಬದಲಾಯಿಸಲು ಕೈಗೊಂಡಿರುವ ಕ್ರಮಗಳೇನು?

ಈ) ಹೆಚ್ಚಿನ ಆದಾಯ ಕೊಡುತ್ತಿರುವ ಬಾದಾಮಿ ಡಿಪೋಗೆ ಹೊಸ ಬಸ್ಸುಗಳನ್ನು

ಹಾಕುವುದಕ್ಕೆ ಹಾಗೂ ಹೆಚ್ಚು ಷೆಡ್ಯೂಲ್‌ಗಳನ್ನು ಕೊಡುವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):- ಬಾಗಲಕೋಟೆ ವಿಭಾಗದ ವ್ಯಾಪ್ತಿಯಲ್ಲಿ 4 ಘಟಕಗಳು ಇರುತ್ತವೆ. 1-3-96 ರಿಂದ 31-3-96ರ ಅವಧಿಯಲ್ಲಿ ಭಾಗಲಕೋಟೆ ವಿಭಾಗದಲ್ಲಿ ರದ್ದಾದ ಅನುಸೂಚಿಗಳು ಹಾಗೂ ಅನುಸೂಚಿ ಕಿ.ಮೀ. ಗಳ ವಿವರ ಈ ಕೆಳಕಂಡಂತಿದೆ.

ಘಟಕ	ರದ್ದಾದ ಅನುಸೂಚಿಗಳು	ರದ್ದಾದ ಅನುಸೂಚಿ ಕಿ.ಮಿ.ಗಳು
ಬಾಗಲಕೋಟೆ	30	10984
ಬಾದಾಮಿ	74	27453
ಮುದ್ದೇಬಿಹಾಳ	33	10786
ಇಳಕಲ್	30	10399
ಒಟ್ಟು	167	59622

1-3-96 ರಿಂದ 31-3-96 ರವರೆಗೆ ನಿಗದಿತ ಸಮಯಕ್ಕೆ ಓಡದ ಘಟಕವಾರು ಅನುಸೂಚಿಗಳು ಹಾಗೂ ಅವುಗಳ ಲಾಭ: ನಷ್ಟದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಘಟಕ	ನಿಗದಿತ ಸಮಯಕ್ಕೆ ಓಡದ ಅನುಸೂಚಿಗಳು	ನಷ್ಟ (ರೂ. ಲಕ್ಷಗಳಲ್ಲಿ)
ಬಾಗಲ ಕೋಟೆ	81	1.00
ಬಾದಾಮಿ	124	1.09
ಮುದ್ದೆಬಿಹಾಳ್	100	0.92
ಇಳಕಲ್	181	1.96
ಒಟ್ಟು	486	4.97

ಈ ವಿಭಾಗದಲ್ಲಿ 7 ಲಕ್ಷ ಕಿ.ಮಿ. ಗಿಂತ ಹೆಚ್ಚಗೆ ಓಡದ 42 ವಾಹನಗಳು ಇವೆ. ಈ ವಾಹನಗಳು 7.50 ಲಕ್ಷ ಕಿ.ಮಿ. ಕ್ರಮಿಸಿದ ನಂತರ ಇವುಗಳ ತಾಂತ್ರಿಕ ಸ್ಥಿತಿಯು ಉತ್ತಮವಾಗಿಲ್ಲದಿದ್ದರೆ, ಇವುಗಳನ್ನು ಬದಲಿಸಲಾಗುವುದು. ಹಾಗೂ 1996-97ನೇ ಸಾಲಿನಲ್ಲಿ, ವಾಹನಗಳ ಬದಲಿಸುವಂತೆ ಯೋಜನೆಯನ್ವಯ 28 ವಾಹನಗಳನ್ನು ಬದಲಿಸಲಾಗುವುದು.

ಬಸ್ ಸೌಲಭ್ಯದ ಅಗತ್ಯ ಕಂಡು ಬಂದಲ್ಲಿ ವಾಹನಗಳ ಲಭ್ಯತೆಯನ್ನು ಪರಿಗಣಿಸಿ, ಹೊಸ ಅನುಸೂಚಿಗಳನ್ನು ಓಡಿಸಲೂ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಕೊಳಚೆ ನಿರ್ಮೂಲನಾ ಮಂಡಳಿಯಿಂದ ಕಾರ್ಯಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 5 (11)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಐತಿಹಾಸಿಕ ಪ್ರಸಿದ್ಧ ಬಾದಾಮಿಯಲ್ಲಿ ಅನೇಕ ವರ್ಷಗಳಿಂದ ಕೊಳಚೆ ಪ್ರದೇಶದಲ್ಲಿ ಜನರು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?